ಚೆನ್ನವೀರ ಕಣವಿ

ಚಿಣ್ಣರ ಲೋಕವ ತೆರೆಯೋಣ

ಮಕ್ಕಳ ಪದ್ಯಗಳು



ನೂರರವತ್ತಾರನೇ ಪ್ರಕಟನೆ:

ಚಿಣ್ಣರ ಲೋಕವ ತೆರೆಯೋಣ

ಮಕ್ಕಳ ಪದ್ಯಗಳು

ಚೆನ್ನವೀರ ಕಣವಿ

ಸಾಹಿತ್ಯ ಪ್ರಕಾಶನ

ಕೊಪ್ಪೀಕರ್ ಬೀದಿ, ಹುಬ್ಬಳ್ಳಿ : ೫೮೦ ೦೨೦

ಸಾಹಿತ್ಯ ಪ್ರಕಾಶನ
ಕೊಪ್ಪೀಕರ್ ಬೀದಿ, ಹುಬ್ಬಳ್ಳಿ : ೫೮೦ ೦೨೦
☎ : (0836) 2367676
e-mail:sahithyaprakashana@yahoo.co.in

ಸಂಪಾದನ - ಪ್ರಕಾಶನ
ಎಂ.ಎ. ಸುಬ್ರಹ್ಮಣ್ಯ

ಸಲಹೆ–ಸೂಚನೆ:
ಸರ್ವಶ್ರೀ ನಿರಂಜನ ವಾಲಿಶೆಟ್ಟರ, ಹುಬ್ಬಳ್ಳಿ
ಡಾ. ಜಿ.ಎಂ. ಹೆಗಡೆ, ಧಾರವಾಡ
ಎಸ್.ಕೆ. ದೇಸಾಯಿ, ಹುಬ್ಬಳ್ಳಿ
ಗೋಪಾಲಕೃಷ್ಣ ಹೆಗಡೆ, ಹುಬ್ಬಳ್ಳಿ

Chinnara Lokava Tereyona: (An Anthology of Children's Poems)
by Dr. Chennaveera Kanavi, Dharwad
Published by: Sahitya Prakashana, Koppikar Road, Hubli: 580 020.

ಮುದ್ರಣ: 2006, 2008, 2014
ಕಾಗದ ಬಳಕೆ: 70 ಜಿಎಸ್ಎಂ ಬುಕ್ ಪ್ರಿಂಟ್ **ಗಾತ್ರ:** ಡೆಮಿ 1/8, **ಪುಟಗಳು:** 68
ಹಕ್ಕುಗಳು: ಲೇಖಕರವು
ಮುಖಪುಟ: ಸುಧಾಕರ ದರ್ಬೆ **ರೇಖಾಚಿತ್ರಗಳು:** ಸಂಕೇತ್ ಗುರುದತ್ತ (ಒಳಪುಟಗಳು)
ಅಕ್ಷರ ಜೋಡಣೆ: ಅನಂತ ಹುದೆಂಗಜೆ, **ವಿನ್ಯಾಸ:** ಸತೀಶ್‌ಕುಮಾರ್
ಮುದ್ರಣ: ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು

ಅರಿಕೆ

'ಹಕ್ಕೀಪುಚ್ಚ' ಮಕ್ಕಳ ಕವನ ಸಂಗ್ರಹವನ್ನು ಸೂಕ್ತ ಚಿತ್ರಗಳೊಂದಿಗೆ ತಮ್ಮ 'ಭಾರತೀಯ ಸಾಹಿತ್ಯ ಭಂಡಾರ'ದಿಂದ ೧೯೮೬ರಲ್ಲಿ ಮೊದಲು ಪ್ರಕಟಿಸಿದ್ದಲ್ಲದೆ, ಅದರ ಮುಂದಿನ ಮೂರು ಆವೃತ್ತಿಗಳಿಗೂ ಕಾರಣರಾದ ಬಿಜಾಪುರದ ಶ್ರೀ 'ಸಿಸು' ಸಂಗಮೇಶ ಅವರನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ. 'ಹಕ್ಕೀಪುಚ್ಚ'ದ ಪದ್ಯಗಳು ಎಳೆಯರಿಂದ ಹತ್ತು ವರುಷಗಳ ಮಕ್ಕಳ ಶಬ್ದಕೋಶದ ಮಿತಿ ಹಾಗೂ ಕುತೂಹಲಕಾರಿಯಾದ ಸುತ್ತಮುತ್ತಲಿನ ಸಂತೋಷದ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಬರೆದಂಥವು. ಈಗ ಅದರ ಜತೆಗೆ 'ಗಿರಿಗಿರಿ ಗಿಂಡಿ' ಹೆಸರಿನ ಎರಡನೇ ಗುಚ್ಛದಲ್ಲಿ, ಮಾನಸಿಕ ಬೆಳವಣಿಗೆಯನ್ನು ಪಡೆಯುತ್ತಿರುವ ಮಕ್ಕಳ ಭಾವನೆಗಳನ್ನು ಪ್ರತಿಬಿಂಬಿಸುತ್ತ, ಅವರ ಬಗೆಗೆ ಹಿರಿಯರ ಆಶೆ, ಆಕಾಂಕ್ಷೆಗಳ ಎಳೆಗಳನ್ನು ಜೋಡಿಸಿಕೊಂಡ ಕೆಲವು ಕವಿತೆಗಳನ್ನು ಸೇರಿಸಿ, ಒಟ್ಟಾಗಿ, 'ಚಿಣ್ಣರ ಲೋಕವ ತೆರೆಯೋಣ' ಎಂಬ ಅಪೇಕ್ಷೆಯೊಂದಿಗೆ ಪ್ರಸ್ತುತ ಕೃತಿ ಹೊರಬರುತ್ತಿದೆ.

ಈ ಅಪೇಕ್ಷೆಯನ್ನು ಸಂತೋಷದಿಂದ ಈಡೇರಿಸಿಕೊಟ್ಟವರು ಈ ಹಿಂದೆ ನನ್ನ 'ಶುಭನುಡಿಯೇ ಹಕ್ಕಿ' ಪುಸ್ತಕವನ್ನು ಪ್ರಕಟಿಸಿದ ಹುಬ್ಬಳ್ಳಿ ಸಾಹಿತ್ಯ ಪ್ರಕಾಶನದ ಮ.ಅ. ಸುಬ್ರಹ್ಮಣ್ಯ ಅವರು, ಅಂದವಾದ ಮುದ್ರಣ ಹಾಗೂ ಅನುರೂಪ ಚಿತ್ರಗಳೊಂದಿಗೆ ಅಣಿಗೊಳಿಸಿದ ಈ ಕೃತಿಯನ್ನು ಕನ್ನಡ ಕಂದರ ಕೈಗೆ ನೀಡುತ್ತಿರುವ ಅವರಿಗೆ ತುಂಬ ಆಭಾರಿಯಾಗಿದ್ದೇನೆ.

ಕಿರಿಯರ ಜೊತೆಗೆ ಹಿರಿಯರಿಗೂ ಕಾವ್ಯಾನುಭವವನ್ನು ನೀಡಬಲ್ಲಂಥ ಮಕ್ಕಳ ಕವಿತೆಗಳನ್ನು ಬರೆದು, ಹೊಸಬರಿಗೆ ಹೊಸ ಮಾದರಿಯೊಂದನ್ನು

ಹಾಕಿಕೊಟ್ಟಿರುವ ಡಾ। ಎಚ್.ಎಸ್. ವೆಂಕಟೇಶಮೂರ್ತಿ ಅವರು ಬೆನ್ನುಡಿ ಬರೆದಿದ್ದಾರೆ. ಅವರಿಗೆ ಸ್ನೇಹಪೂರ್ವಕ ವಂದನೆಗಳು.

ಈ ಸಂಗ್ರಹದ ಕೆಲವು ಕವಿತೆಗಳಿಗೆ 'ತಟ್ಟು ಚಪ್ಪಾಳೆ ಪುಟ್ಟ ಮಗು' (೧೯೯೧), 'ಹೂವಿನಬುಟ್ಟಿ' (೧೯೯೩), 'ಶತಮಾನದ ಮಕ್ಕಳ ಸಾಹಿತ್ಯ' (೨೦೦೧) ಇವೇ ಮೊದಲಾದ ಸಂಕಲನಗಳಲ್ಲಿ ಎಡೆಗೊಟ್ಟ ಸಂಪಾದಕರಿಗೂ ಕೆಲವನ್ನು ಸಂದರ್ಭಾನುಸಾರ ಹಾಡುತ್ತಾ ಧ್ವನಿಸುರುಳಿಗಳಿಗೂ ಬಳಸಿಕೊಂಡು ಮಕ್ಕಳನ್ನು ಮುದಗೊಳಿಸುತ್ತಿರುವ ಗಾಯಕವೃಂದಕ್ಕೂ ನಾನು ತುಂಬ ಋಣಿ.

ಧಾರವಾಡ — ಚೆನ್ನವೀರ ಕಣವಿ
೨೦.೬.೨೦೦೬

ಮೂರನೆಯ ಅಚ್ಚಿಗೆ

ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನದ ಶ್ರೀ ಮ. ಅ. ಸುಬ್ರಹ್ಮಣ್ಯ ಅವರ ವಿಶೇಷಾಸಕ್ತಿಯಿಂದ ಈ ಕೃತಿ ಮೂರನೇ ಆವೃತ್ತಿಯನ್ನು ಪಡೆಯುತ್ತಿದೆ. ಅದಕ್ಕಾಗಿ ಅವರಿಗೆ ತುಂಬ ಕೃತಜ್ಞ.

ಪ್ರಜಾವಾಣಿ, ಸಾಪ್ತಾಹಿಕ ಪುರವಣಿ (೧೦.೧೧.೨೦೧೩) ಮಕ್ಕಳ ಸಾಹಿತ್ಯದ ವಿಶೇಷ ಸಂಚಿಕೆಗಾಗಿ ಡಾ। ಎಚ್.ಎಸ್. ವೆಂಕಟೇಶಮೂರ್ತಿಯವರ ಪ್ರೇರಣೆಯಿಂದ ಬರೆದ 'ನಾಯಿ, ಬೆಕ್ಕು ಮತ್ತು ಕ್ರಿಕೆಟ್ಟು' ಎಂಬ ಪದ್ಯವೊಂದರ ಸೇರ್ಪಡೆಯನ್ನು ಬಿಟ್ಟರೆ ಉಳಿದದ್ದೆಲ್ಲ ಮೊದಲ ಆವೃತ್ತಿಯಲ್ಲಿದ್ದಂತೆಯೇ.

ಧಾರವಾಡ — ಚೆನ್ನವೀರ ಕಣವಿ
೮.೩.೨೦೧೪

ಅರ್ಪಣೆ



ಪ್ರೀತಿಯ ಮೊಮ್ಮಕ್ಕಳು

ಅಪೂರ್ವ

ಅಭಿನವ

ಕುಶಾಲ್

ಸೃಷ್ಟಿ

ಸೋನಾಲಿ

- ಇವರಿಗೆ



ಪರಿವಿಡಿ



ಚಿಣ್ಣರ
ಲೋಕವ
ತೆರೆಯೋಣ

ಹುಟ್ಟಿದ ದಿನ

ರವಿವಾರ ಹುಟ್ಟಿರುವ ಮಕ್ಕಳೆಲ್ಲ
ಕಲಿಯುವರು ಸರಿಯಾಗಿ ಪಾಠಗಳನು

ಸೋಮವಾರ ದಿವಸ ಹುಟ್ಟಿದವರು
ನಿತ್ಯವೂ ಸತ್ಯವನೆ ಮಾತನಾಡುವರು

ಯಾರು **ಮಂಗಳವಾರ** ಹುಟ್ಟಿದವರು
ಯಾವ ಕೆಲಸಕು ಹಿಂದೆ ಸರಿಯದವರು

ಬುಧವಾರ ಹುಟ್ಟಿರುವ ಹುಡುಗ-
ಹುಡುಗಿಯರು
ತಂದೆ-ತಾಯ್ಗಳ ಮಾತು ಮೀರದವರು


ಸರಿಯಾಗಿ **ಗುರುವಾರ** ಹುಟ್ಟಿದವರು
ಎಂದೆಂದಿಗೂ ತಾಳ್ಮೆ ತಪ್ಪದವರು

ಯಾರು ಹುಟ್ಟಿದ ದಿನವು **ಶುಕ್ರವಾರ**
ಅವರು ಮಾಡುವುದೆಲ್ಲ ಪರೋಪಕಾರ

ಶನಿವಾರ ಹುಟ್ಟಿದರೆ ಒಂದು ವೇಳೆ
ಶಾಂತ ಗುಣಿಗಳು ಅವರು, ತಪ್ಪಿಸರು ಶಾಲೆ

ಈಗ ಹೇಳಿರಿ ಬೇಗ ಕುಣಿಕುಣಿದು ಬಂದು
ನೀವು ಹುಟ್ಟಿದ ದಿವಸ ಯಾವುದೆಂದು.





ಯಾವುದಿದು?


ಯಾರೂ ಎಣ್ಣೆಯ ಹಾಕಿಲ್ಲ
ಯಾರೂ ಕಡ್ಡಿಯ ಕೊರೆದಿಲ್ಲ;
ಆದರೂ ಸಣ್ಣಗೆ ದೀಪವಿದೆ
ಗಾಳಿಗೆ ಆರದೆ ಮಿನುಗುತಿದೆ.



ಸುಮ್ಮನೆ ಒಂದೆಡೆ ಕುಳಿತಿಲ್ಲ
ಅಮ್ಮನು ಕೈಯಲಿ ಹಿಡಿದಿಲ್ಲ
ಗಾಳಿಗೆ ತೇಲುವ ದೀಪವಿದು
ಹೇಳಿರಿ ನೋಡುವ, ಯಾವುದಿದು?

ಕತ್ತಲೆ ಕವಿದಿಹ ಬಯಲಲ್ಲಿ
ಚಿಕ್ಕೆಯು ಮಿನುಗುವ ತೆರದಲ್ಲಿ
ಇರುಳಿಗೆ ಬೆಳಕಿನ ಮಣಿಯಾಗಿ
ಹೊಳೆಯುವದೇನದು ಚೆಲುವಾಗಿ?

ಆಹಾ ಹೊಳೆಯಿತು ನನಗೀಗ!
ಹೇಳುವೆನೀಗಲೆ ಒಂದೆ ಸಲ
ಹತ್ತುವ, ಆರುವ, ಹಾರುವ ದೀಪ
ಹೌದೆ, ಹೌದೆ ಮಿಂಚುಹುಳ?



ದುಡಿಮೆ




ಸಿಪ್ಪೆಯ ಸುಲಿದು ತೆಗೆದರೆ ಮಾತ್ರ
ಹಣ್ಣಿನ ತಿರುಳನು ಮೆಲಬಹುದು;
ತೆಂಗಿನ ಕಾಯಿಯ ಚಿಪ್ಪನು ಒಡೆದರೆ
ಕೊಬ್ಬರಿ ತಿಳಲನು ತಿನಬಹುದು.



ಅಕ್ಕಿಯ ಸುಡುಸುಡು ನೀರೊಳು ಕುದಿಸಲು
ಗಮ ಗಮ ಅನ್ನವನುಣಬಹುದು;
ಅರಿವೆಯ ತಂದು ರಾಟಿಗೆ ಹೊಲಿದರೆ
ಚಂದದ ಅಂಗಿಯ ತೊಡಬಹುದು.



ಅಕ್ಷರ ಓದಲು ಬರೆಯಲು ಕಲಿತರೆ
ಕವಿತಾ, ಕಥೆಗಳು ತಿಳಿಯುವವು.
ದಿನವೂ ತಪ್ಪದೆ ಶಾಲೆಗೆ ಹೋದರೆ
ಪ್ರಶ್ನೆಗೆ ಉತ್ತರ ಹೊಳೆಯುವವು.



ದಿನ ದಿನ ಹೂವಿನ ಬಂಡನು ಹೀರಲು
ಜೇನು ತುಪ್ಪ ಕೊಡ ತುಂಬುವುದು;
ಹನಿ ಹನಿ ಸೆಳಕಿನ ಮಳೆ ಸುರಿದಾಗಲೆ
ಹಳ್ಳ, ಬಾವಿ, ಕೆರೆ ತುಳುಕುವವು.

ಚಿಣ್ಣರ
ಲೋಕವ
ತೆರೆಯೋಣ



ಎಲ್ಲರು ತಮ್ಮಯ ಕೆಲಸವ ತಾವೇ
ಮಾಡಲು ದೇಶವು ಬೆಳೆಯುವುದು;
ದುಡಿದರೆ ಮಾತ್ರವೆ ದೊಡ್ಡವನಾಗುವೆ
ಸ್ವಾತಂತ್ರ್ಯದ ಸವಿ ತಿಳಿಯುವುದು.

ಸ್ವಂತ ಮನೆ

ಸಿಮೆಂಟು ಬೇಡ, ಇಟ್ಟಿಗೆ ಬೇಡ;
ನಾವೇ ಮನೆಯನು ಕಟ್ಟುವೆವು;
ಝಣ ಝಣ ರೊಕ್ಕವು ಸಿಕ್ಕರು ಬೇಡ
ಮಣ್ಣೂ ಉಸುಕೂ ಒಟ್ಟುವೆವು.

ಕಟ್ಟಿಗೆ ಬೇಡ, ಕಬ್ಬಿಣ ಬೇಡ
ಆಳುಗಳೊಬ್ಬರು ಬೇಡಣ್ಣ;
ಕಣ್ಣು ಮುಚ್ಚಿ ಕಣ್ ತೆರೆದರೆ ಸಾಕು
ತಯಾರಾಗುವುದು ನೋಡಣ್ಣ.



ಬಡಿಗರು, ಕಮ್ಮಾರುಪ್ಪಾರೇತಕೆ?
ಬಡ ಬಡ ನಾವೇ ಒಟ್ಟುವೆವು;
ಎಲ್ಲಿ ಹುಡುಕಿದರು ಸಿಗಲಾರದ ಮನೆ
ಒಂದೇ ಚಣದಲಿ ಕಟ್ಟುವೆವು.

ಕಪಾಟು, ಕಿಡಿಕಿಯು ಕಿಂಡಿಗಳಿಲ್ಲ
ಸುಣ್ಣ ಬಣ್ಣಗಳ ಬಳಿದಿಲ್ಲ;
ಕಳ್ಳರು-ಗಿಳ್ಳರು ನುಗ್ಗಲು ಸಾಧ್ಯವೆ?
ಯಾರೂ ಚಿಂತಿಸಬೇಕಿಲ್ಲ.

ಚಿಲಕವು, ಕೊಂಡಿಯು, ಕೀಲಿಗಳೇತಕೆ?
ಅಗಳಿಯು ರಗಳೆಯ ಹಚ್ಚೆಲ್ಲ;
ಖರ್ಚಿನ ಮಾತೇ ಬಾರದು ಇಲ್ಲಿ
ನಗರಸಭೆಯೂ ಕರ ಹೇರಿಲ್ಲ.

ಸಾಲದ ಚಿಂತೆಯು, ಆಳಿನ ಗೋಳು-
ಒಂದೇ? ಎರಡೇ? ಎಲ್ಲಿ ಕೊನೆ?
ಅಪ್ಪಟ ಮಳಲಲಿ ಕಟ್ಟಿದೆವಿದನು
ಗುಬ್ಬಿಯ ಗೂಡಿದು, ಸ್ವಂತ ಮನೆ.


ಚಿಣ್ಣರ
ಲೋಕವ
ತೆರೆಯೋಣ

ನನ್ನ ಗೊಂಬೆ




ಚಿಕ್ಕ ಗೊಂಬೆ, ನನ್ನ ಗೊಂಬೆ
ಚಂದವಾದ ಗೊಂಬೆ,
ನಗುತ ಒಮ್ಮೆ ಮಾತನಾಡು
ನಾನು ಬೇಡಿಕೊಂಬೆ.

ಹಾಡಲೊಲ್ಲೆ, ಕುಣಿಯಲೊಲ್ಲೆ –
ನೋಡಲೆಷ್ಟು ಸುಂದರ!
ಬೀದಿಗೋಡಿ ಆಡಲಾರೆ –
ನನಗೆ ಮಾತ್ರ ಆತುರ.




ವರ್ಷವಾಯ್ತು, ಬೆಳೆದೆ ಇಲ್ಲ–
ಚೋಟುದ್ದವೆ ಇರುವೆ;
ಒಮ್ಮೆ ಕೂಡ ಅಮ್ಮನನ್ನು
ಅತ್ತು ಕಾಡದಿರುವೆ.

ನನ್ನ ಮೇಲೆ ನಿನ್ನ ಕೋಪ
ಬೇಡ, ಊಟ ಮಾಡು;
ಮೆತ್ತಗೊಂದು ಹಾಸಿಕೊಡುವೆ
ಗಪ್ಪು ನಿದ್ದೆ ಮಾಡು.



ನನ್ನ ಮೇಲೆ ಎಷ್ಟು ಪ್ರೀತಿ
ಅಮ್ಮನಿಗೆ, ಗೊತ್ತೆ?
ನಾನು ಕೂಡ ನಿನ್ನ ಮೇಲೆ
ಅಷ್ಟು ಪ್ರೀತಿ ಮತ್ತೆ!




ಆಮೆ





‘ಆಮೆ, ಆಮೆ, ಎಲ್ಲಿಗೆ ಹೊರಟೆ?
ಬೆನ್ನಿಗೆ ಗಂಟೂ ಮೂಟೆ!
ಬಡ ಬಡ ನಡೆದರೆ ಎಡವೀ, ಬಿದ್ದೀ
ನಿನಗೂ ಅವಸರ ಉಂಟೇ?’

‘ನಿನ್ನೆಯೆ ಸಂಜೆಗೆ ಬಂದಿತು ತಂತಿ–
ಮರಿಮೊಮ್ಮಗನಿಗೆ ಮದುವೆ.’
‘ಓಹೊ! ಚಕ್ಕಡಿ ಹೂಡಿಸು ಗಿಲ್ ಗಿಲ್!
ನಾನೂ ಮದುವೆಗೆ ಬರುವೆ.’




‘ಎತ್ತುಗಳೆರಡೂ ಮಲಗೇ ಬಿಟ್ಟರೆ
ಹೊತ್ತಿಗೆ ಹೇಗೋ ಹೋಗುವುದು?’
‘ಭರ್ರನೆ ಪೋಂವ್ ಪೋಂವ್ ಕಾರನು ಬಿಟ್ಟರೆ
ಮದುವೆಯ ಮಂಟಪಕೊಯ್ಯುವುದು.’








‘ದಾರಿಯ ನಡುವೇ ಕೆಟ್ಟರೆ ಹೇಗೋ?
ಮಳೆಯೊಳಗೆಲ್ಲಾ ಹುದುಲು.’
‘ಭುಕುಬುಕು ಭುಕುಬುಕು ರೈಲಿಗೆ ಹೊರಡು
ಬೀಗರ ಜೊತೆಗೇ ಬರುವೆ.’
‘ಕಂಬಿಯು ತಪ್ಪಿ ಡುಮಕೀ ಹೊಡೆದರೆ
ಆಯಿತು ನಂದೇ ಮದುವೆ.’
‘ಟ್ರಿಣ್ ಟ್ರಿಣ್ ಸೈಕಲ್ ಡಬಲ್ ಸವಾರಿ
ಒಂದೇ ತಾಸಿಗೆ ಒಯ್ಯುವೆನು.’



‘ಪೊಲೀಸ್ ಕಂಡರೆ ಬಿಡುವನೆ ತಮ್ಮಾ
ನಾನೇ ಮೆಲ್ಲಗೆ ಸಾಗುವೆನು.’





ಕಪ್ಪೆ

ಟುಣುಕ್ ಪುಣುಕ್ ಜಿಗಿಯುವ ಕಪ್ಪೆ
ಏನಿದು ಸಡಗರ! ಸುತ್ತೂ ಕಡೆಗೆ?
ನಿಲ್ಲುವೆಯಾ ಚಣ, ಮಾತಾಡುವ ಜೊತೆಗೆ.

ದಿನವೂ ತಪ್ಪದೆ ನೀರೊಳು ಮುಳುಗಿ
ಜಳಕವ ಮಾಡುವೆ, ಆದರೂ ಏತಕೆ
ಹಕ್ಕಳೆಗಟ್ಟಿದ ಮೈಯಾಗಿರುವೆ?



ಮಳೆಯು ಮುಗಿದು ಚಳಿಗಾಲವು ಬರಲು
ದಂಡೆಯೊಳೆಲ್ಲೊ ಕಾಣದೆ ಕುಳಿತು
ಏತಕೆ ಒಟಗುಟ್ಟುವೆ ಹೇಳು.





ಹುಳು ಹುಪ್ಪಡಿಗಳ ತಿಂದರು ನೀನು
ನುಂಗೇ ಬಿಡುವುದು ನಿನ್ನನು ಹಾವು
ಸುಳಿವೇ ತಿಳಿಯದು ನಿನಗೆ.
ಕೆರೆಯೊಳು ಸಲೀಸು ಈಜುತಲಿರುವೆ
ನೆಲದ ಮೇಲೆ ಕುಪ್ಪಳಿಸುತ ಬರುವೆ
ಯಾವುದು ಖುಷಿ ಈ ಎರಡರೊಳು?

ದುಂಡಗೆ ಕಣ್ಣನು ತೆರೆದೇ ಇರುವೆ
ಬೆಳ್ಳಗೆ ಹೊಟ್ಟೆಯನುಬ್ಬಿಸಿ ತೋರುವೆ
ಕಪ್ಪೆ, ಗಪ್ ಚಿಪ್ ಯಾಕಿರುವೆ?



ಬಸವನ ಹುಳು


'ಬಸವನ ಹುಳುವೆ, ತಂಗೀ ಬಸವನ ಹುಳುವೆ
ಏನಿದು ಹೆಗಲಿಗೆ? ಎಲ್ಲಿಗೆ ಮೆಲ್ಲಗೆ'

'ನಮ್ಮ ಅಮ್ಮನ ದೊಡ್ಡಮ್ಮನ ಜಳಕಕೆ
ನೀರಿನ ಬಿಂದಿಗೆ ಹೊತ್ತಿರುವೆ.'

'ಹೌದೆ? ಎಷ್ಟು ಹೊತ್ತಿಗೆ, ಇನ್ನೆಷ್ಟು ದಿವಸಕೆ
ನೀನೆಲ್ಲಿಗೆ ಹೋಗುವೆ ಹೀಗೆ?'

'ಹತ್ತೆ ದಿವಸಕೆ ಹೋಗುವೆ; ಅಮ್ಮನು ಅಲ್ಲಿ
ಕಾದಿರುವಳು ಬಚ್ಚಲ ಮನೆಯೊಳಗೆ.'







ಗೂಡು-ಬೀಡು


'ಮುದ್ದಿನ ಗಿಣಿಯೆ ಚೆಲುವಿನ ಖಣಿಯೆ
ಎಲ್ಲಿದೆ ನಿನ್ನಯ ಗೂಡು?'
'ಅರಳೆಯ ಮರದ ಪೊಟ್ಟರೆಯೊಳಗೆ
ನನಗೂ ಮರಿಗೂ ಬೀಡು.'



'ಗೀಜಗ ಹಕ್ಕಿಯೆ, ಸೋಜಿಗವೆನಗೆ
ನೀನೆಲ್ಲಿರುತಿಹೆ ಹೇಳು–'
'ಗಿಡದ ಟೊಂಗೆಯಲಿ ಜೋತಿದೆ ನೋಡು
ನಾನೇ ಹೆಣೆದಿಹ ಗೂಡು.'

'ಹೊಳಪುಗಪ್ಪಿನ ಡೊಂಬ ಕಾಗೆಯೆ
ಎಲ್ಲಿದೆ ನಿನ್ನಯ ಗೂಡು?'
'ಗಿಡದ ಮೇಲೆತ್ತರ ಕಟ್ಟಿಕೊಂಡಿರುವೆ
ಅಲ್ಲೇ ನನ್ನಯ ಬೀಡು.'








‘ಸಳಸಳ ಸಾಗುವ, ಬುಸುಬುಸು ನಾಗ
ನೀನೆಲ್ಲಿಂದಲಿ ಬರುವೆ?’
‘ಕಂಟಿಯ ಹೊದರು, ಹುತ್ತದ ಡೊಗರು
ಒಳಗೇ ಸುರುಳಿಯ ಸುತ್ತಿರುವೆ.’

‘ಗುಡುಗು ಹಾಕಿ ಭಯಗೊಳಿಸುವ ಸಿಂಹ
ಯಾವ ಹಕ್ಕೆಯಲಿ ಮಲಗುತಿಹೆ?’
‘ಕಾಡಿನಲ್ಲಿ ಬಲುದೂರ ಬಂಡೆಗವಿ
ಬೇಟೆಯಾಡಿ ಕೊನೆಗಲ್ಲಿರುವೆ.’



‘ಮೆಲ್ಲಗೆ ನುಸುಳುವ ಬಸವನ ಹುಳುವೆ
ಎಲ್ಲಿದೆ, ತೋರಿಸು ನಿನ್ನ ಮನೆ.’
‘ಇಲ್ಲಿದೆ ನೋಡಿರಿ ಬೆನ್ನಿನ ಮೇಲೆಯೆ
ನಾ ಹೋದಲ್ಲೆಲ್ಲಾ ಬರುವ ಮನೆ.’







ಬಿದಿಗೆಯ ಚಂದಿರ

ಮಿದು ಬೆರಳಿನ ಸೆಳ್ಳುಗುರಿನ ಹಾಗೆ
ಬೆಳ್ಳಗೆ ಬಿದಿಗೆಯ ಚಂದಿರನೆ,
ಹಾಯಿಯ ಬಿಚ್ಚದೆ ತೇಲುತ ಹೊರಟೆ
ಹೇಳು ಎಲ್ಲಿಹುದು ನಿನ್ನ ಮನೆ?



ನೀಲಾಕಾಶದಿ ದೋಣಿಯ ಹಾಗೆ
ತೇಲಿದೆ, ಉರುಳಿದೆ ಬೆಳ್ಳಿ–ಬಳೆ;
ನನಗೂ ದೋಣಿಯ ಹತ್ತಿಸು, ನಿನಗೂ
ಕೊಡಿಸುವೆ ಉಂಡೀ–ಕೋಡಬಳೆ.





ಮೂಡಲ ಹೋರಿಯ ಕೋಡಿನ ಹಾಗೆ
ಚೂಪಾಗಿರುತಿಹೆ ಎರಡು ಕಡೆ;
ಇರಿಯುತ ನನ್ನನು ಕೆಡವೇ ಬಿಟ್ಟರೆ
ನೋಡು, ನಿನ್ನ ಜೊತೆ ಮಾತಾಡೆ.

ಕುಂಬಳ ಕಾಯಿಯ ಹೋಳಿನ ಹಾಗೆ
ಬಾನ ಬುಟ್ಟಿಯಲಿ ಕುಳಿತಿರುವೆ;
ಅಮ್ಮನ ಕೈಯೊಳು ಸಿಕ್ಕರೆ ನೀನು
ಕಮ್ಮಗೆ ವಡೆಯನು ಮಾಡಿಸುವೆ.



ಬಾನಲಿ ತೇಲುವ ದುಂಡು ಕನ್ನಡಿ
ಹಾಗೆ ಹೊಳೆಯುತಿಹ ಚಂದಿರಗೆ
ನನ್ನೀ ಮುಖವು ಕಾಣಿಸುತಿರುವುದೆ?
ನೋಡುವೆ ಬಾರೊ ಕೈಯೊಳಗೆ.




ಮಿಯಾಂವ್ ಬೆಕ್ಕಣ್ಣ




ಮಿಯಾಂವ್ ಮಿಯಾಂವ್ ಬೆಕ್ಕಣ್ಣ
ಕಲ್ಲೀಮೀಸೆಯ ಚೆಲುವಣ್ಣ;

ಯಾರೂ ಇಲ್ಲದ ಹೊತ್ತನು ನೋಡಿ
ಅಡಿಗೆಯ ಮನೆಯಲಿ ಮೆಲ್ಲನೆ ಓಡಿ



ಗಡಬಡ ಹಾಲಿನ ಪಾತ್ರೆಯ ಹುಡುಕಿ
ಲೊಚ ಲೊಚ ಕುಡಿವೆ ಕಣ್ಣನು ಮುಚ್ಚಿ
ಮಿಯಾಂವ್ ಮಿಯಾಂವ್ ಬೆಕ್ಕಣ್ಣ
ಕಲ್ಲೀಮೀಸೆಯ ಮೋಸಣ್ಣ;

ರಾತ್ರಿಯೊಳೆಲ್ಲ ಬೇಟೆಯನಾಡುವೆ
ಇಲಿಗಳ ಕಂಡರೆ ಜಪ್ಪಿಸಿ ಹಿಡಿವೆ;
ಹಗಲೋ? ಅಟ್ಟದಿ ಗುರುಗುರು ನಿದ್ದೆ
ಕನಸಿನಲೂ ಇಲಿ ಕಂಡಿರುವೆ.
ಮಿಯಾಂವ್ ಮಿಯಾಂವ್ ಬೆಕ್ಕಣ್ಣ
ಕಲ್ಲೀಮೀಸೆಯ ಒರಸಣ್ಣ.




ಟಣ್ಣನೆ ಹಾರುವೆ ಕೆಳಗಡೆ ಜಿಗಿವೆ,
ಸಪ್ಪಳಾಗದೊಲು ಹೆಜ್ಜೆಯನಿಡುವೆ;
ಟಾಮಿಯ 'ಬೌ ಬೌ' ಕೇಳಿದ ಕೂಡಲೆ
ಮಟಾಮಾಯ ನೀ ಹೇಳದಲೆ.
ಮಿಯಾಂವ್ ಮಿಯಾಂವ್ ಬೆಕ್ಕಣ್ಣ
ಕಲ್ಲೀಮೀಸೆಯ ತಿರುವಣ್ಣ.


ಪುಟ್ಟ ಪಾಪು



ಎರೆಯುವಾಗ ನಮ್ಮ ಪಾಪು
ಬಹಳ ಅಳುವನು,
ಎರೆದ ಮೇಲೆ ಅಮ್ಮಿ ಕುಡಿದು
ಮಲಗಿ ಬಿಡುವನು.

ಪಾಪು ಅತ್ತರೆ ನಾನು ಆಡಿಸುವೆನು
ಒಮ್ಮೊಮ್ಮೆ ಬೇಕಂತ ಕಾಡಿಸುವೆನು,
ಆಗ ಅವ್ವನು ಸಿಟ್ಟಿಗೆದ್ದು ನೋಡುವಳು,
ಅಮ್ಮ ಮೆಲ್ಲಗೆ ಬಂದು ಗಲ್ಲ ತೀಡುವಳು.





ಪುಟ್ಟು ಯಾರನು ಕಾಡುವುದಿಲ್ಲ,
ಅಕ್ಕನ ಕಂಡರೆ ಬಿಡುವದೆ ಇಲ್ಲ,
ಮೆಲ್ಲಗೆ ಹಿಡಿದರೆ ಎರಡೂ ಗಲ್ಲ
ಹಚ್ಚೆ ಬಿಡುವನು ಬಾಯನ ಜೊಲ್ಲ.

ಪುಟ್ಟನ ಕಣ್ಣು ಕವಳಿ ಹಣ್ಣು,
ಎರಡೂ ಗಲ್ಲ ಮಾವಿನ ಹಣ್ಣು,
ಮೂಗು ಉತ್ತತ್ತಿ ಬಾರಿ ಹಣ್ಣು,
ಅದನೆ ನೋಡುವವೆಲ್ಲರ ಕಣ್ಣು.





ನನ್ನ ತಮ್ಮ ಸತ್ಯಜಿತ
ಸಿಟ್ಟು ಬರಲು ಚೀರುವ;
ಕೈಗೆ ಸಿಕ್ಕ ಪೇಪರನ್ನು
ಪರ್ ಪರ್ ಹರಿಯುವ.

ನಮ್ಮ ಪುಟ್ಟ ಬಹಳ ದಿಟ್ಟ
ನಾಯಿ ಬಾಲ ಜಗ್ಗಿದ,
'ಬೌ ಬೌ' ಬೊಗಳಿದಂತೆ
ಇವನು ಬಹಳ ಹಿಗ್ಗಿದ.



ಕುಂತಲ್ಲೇ ಕುದರಿ ಹತ್ತಿ ಕುಣಿಯುವನು
ಎರಡೂ ಕೈ ಲಗಾಮು ಜಗ್ಗುವನು
ಕಾಲು ಬಡಿದು ಓಡಿದಂತೆ ಬಗ್ಗುವನು
ಉಳಿದವರು ನೋಡಿದರೆ ಹಿಗ್ಗುವನು.



ಹಕ್ಕೀ ಪುಚ್ಚ




ಮಿರಿ ಮಿರಿ ಮಿಂಚುವ ಹಕ್ಕೀ ಪುಚ್ಚ
ಗಿರಿ ಗಿರಿ ತಿರುಗಿದೆ ನೋಡಣ್ಣ,
ಹಣ್ಣಿನ ತೋಟದ ಬೇಲಿಯ ಹೊರಗೆ
ಸಿಕ್ಕಿತು ನನಗೀ ಗರಿಯಣ್ಣ.

ತೋಟದಿ ಗರಿಯನು ಉದುರಿಸಿ ಹಕ್ಕಿ-
ಹುಡುಕುತ್ತಿರುವುದೆ ಗಾಳಿಯಲಿ?
ಬಣ್ಣದ ಗರಿಯನು ಚೊಣ್ಣದ ಕಿಸೆಯಲಿ
ಇಡುವೆನು, ಯಾರಿಗೂ ಹೇಳದಿರಿ.

ಕಾಮನಬಿಲ್ಲಿನ ಬಣ್ಣದ ಗರಿಯಿದು
ಹಾರುತ ಮೆಲ್ಲನೆ ಇಳಿಯುವುದು;
ಹಕ್ಕಿಯು ಬಂದು ಹಿಡಿದರೆ ಗುರುತು
ನಾನೇ ಪುಚ್ಚಕೆ ಚುಚ್ಚುವೆನು.
ಬೆರಳಿಗೆ ಮೆತ್ತಗೆ ರೇಶಿಮೆ ನುಣುಪು
ಮಿನಿ ಮಿನಿ ಬಂಗಾರದ ಹೊಳಪು,
ಹುಡುಕುವೆ ಏತಕೆ, ಬಾರದೆ ನೆನಪು?
ಇಲ್ಲಿದೆ ಬಾ, ಗರಿ ಕಿನಕಾಪು.

ಟೊಪ್ಪಿಗೆ ತುದಿಯಲಿ ಒಪ್ಪುವ ಗರಿಯಿದು
ರಾಜನಂತೆ ನಾ ಡೌಲಿನಲಿ
ನಡೆಯುವೆ, ಬಣ್ಣದ ಹಕ್ಕಿಯು ಕೇಳಲಿ
ಕೊಟ್ಟು ಬಿಡುವೆ ಸಂತೋಷದಲಿ.





ಚಿಣ್ಣರ
ಲೋಕವ
ತೆರೆಯೋಣ

ಗಿರಿಗಿರಿ ಗಿಂಡಿ

೧



ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ
ಸಂಜೆಯ ಗಾಳಿ
ತಂಪೊಳು ತೇಲಿ
ಗರಿಗರಿ ಮೋಡ
ಬಾನಿನ ಕೂಡ
ಮೈಮರೆತೋಟ
ಚಕ್ಕಂದಾಟ;
ಬಣ್ಣದ ಹಕ್ಕಿ
ಕೊರಳಲ್ಲುಕ್ಕಿ
ಸುವ್ವೀ ಚವ್ವೀ
ಹಾಡಿದೆ 'ಟುವ್ವಿ',
ಬನ ಬನದಲ್ಲಿ
ಮನ ಮನದಲ್ಲಿ
ಸಂತಸ ಬೀರಿ
ಹಾಡಿನ ಲಹರಿ
ಮೆಲ್ಲಗೆ ನಿಂತಿ
ಬಾರೇ ಗೆಳತಿ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ



೨

ಬಗಾಟ ಬಗರಿ
ತಿರುಗುವ ತಿಗರಿ
ತೆಂಗಿನ ಚವರಿ
ಗಾಳಿ ಸವಾರಿ
ಹಿತ್ತಲದಲ್ಲಿ
ಕುಂಬಳ ಬಳ್ಳಿ
ಅಂಗಳದಲ್ಲಿ
ಹೂ ಗಿಡ ಬಳ್ಳಿ
ಮುಂಗಡೆಯಲ್ಲಿ
ಬೇಲಿಯ ಕಳ್ಳಿ
ಬಳಿಯಲಿ ಸುಳಿದು
ಬೇಸರ ಕಳೆದು
ಪಾತರಗಿತ್ತಿ
ಪಕ್ಕಾ ಹತ್ತಿ
ಮೈಕೈ ತುಂಬ
ಹೂ ಮಕರಂದ

ಮಂಜಿನ ಹನಿಯ
ಮುತ್ತಿನ ತೆನಿಯ
ಹುಲ್ಲಿನ ವಸತಿ
ಕುಸುಮ ಕಸೂತಿ
ಕಾಮನ ಬಿಲ್ಲ
ಮೂಡಿಹುದಲ್ಲ!
ರೇಶಿಮೆ ಅಂಚ
ಮಿರಿ ಮಿರಿ ಮಿಂಚ
ಬಣ್ಣದ ಕುಂಚ
ಯಾರದು
ಹೊಂಚ?
ಬಲಗೈ ತಾರ
ಎಡಗೈ ತಾರ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ



೩

ಕಂಬಕಂಬಾಟ
ನಿಂಬಿಯ ತೋಟ
ನವಿಲಿನ ಓಟ
ತಕಥೈ ಥಾಟ
ಗೆಳತಿಯರೆಲ್ಲ
ಬಂದಾರೇನ
ಮಲ್ಲಿಗೆ ಹೂವ
ಮುಡಿದಾರೇನ
ಗುಲಾಬಿ ಲಂಗ
ಉಟ್ಟಾರೇನ
ನೀಲಿ ಪೋಲಕ
ತೊಟ್ಟಾರೇನ
ನತ್ತು ಬುಗುಡಿ
ಇಟ್ಟಾರೇನ



ಚಿನ್ನದ ಬಳೆಗೆ
ಅತ್ತಾರೇನ?
ಬಾರೇ ಗೆಳತಿ
ನನ ಬಂಗಾರಿ
ವಸಂತ ಕಾಲದ
ಸಿರಿ ಸಿಂಗಾರಿ
ಮಾವಿನ ತಳಿರು
ಹುಣಸೆಯ ಚಿಗುರು
ಗಾಳಿಯ ಸುಳಿಗೆ
ಕುಣಿತದ ಕರೆಗೆ
ತಲೆಯನು ತೂಗಿ
ಮನಕಿಂಬಾಗಿ




ರವದೆಯ ಪೀಪಿ
ಊದುವದೇನ
ಹರುಷದ ಕೇಕಿ
ಹಾಕುವದೇನ?
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ



ಳ

ನಗೆ ಮೊಗದಲ್ಲಿ
ಹರುಷದ ಬಳ್ಳಿ
ಕೋಮಲವೆನಿಸಿ
ರಾಗವ ರಚಿಸಿ
ತುಟಿಯಲಿ ಚಿಗುರಿ
ಗಲ್ಲದಲರಳಿ
ಕರುಳಲಿ ಹೊರಳಿ
ಜಡೆಯಲಿ ತೂಗಿ
ಬಿಂಕದಿ ಬೀಗಿ
ನಿರಿ ಚೆಲ್ಲಾಟ
ಕೋಗಿಲೆ ಕುಕಿಲು
ತೆರೆ ಚೆನ್ನಾಟ;
ದಿನದಿನಕೊಂದು
ಹೊಸತನ ಬಂದು
ಸೆರಗನು ಹೊಚ್ಚಿ
ಕಣ್ಣಿವೆ ಮುಚ್ಚಿ
ತೆರೆ ತೆರೆವಂತೆ
ಚೆಲುವಿನ ಸಂತೆ!
ಕಣ್ಣಿನ ತುಂಬ
ಕನಸಿನ ಬಿಂಬ
ಜೀವದ ಗೆಳತಿ
ಒಲವಿನ ಒರತಿ
ಇತತ್ತ ಬಾರ
ಇದಿರಿಗೆ ಬಾರ
ಬಲಗೈ ತಾರ
ಎಡಗೈ ತಾರ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.





ಆನಿ ಬಂತವ್ವಾನಿ



ಆನಿ ಬಂತವ್ವ ಆನಿ
ಇದು ಎಲ್ಲಿತ್ತವ್ವ ಮರಿಯಾನಿ ॥

ಕಳ್ಳಿಸಾಲಾಗ ಮುಳ್ಳ ಬೇಲ್ಯಾಗ
ಓಡಿಯಾಡತಿತ್ತಾನಿ,
ಕಾಲ ಮ್ಯಾಲ ಅಂಗಾತ ಮಲಗಿ
ತೂರನ್ನತೈತಿ ಈ ಆನಿ!


ಎಂಥ ಚಿಟ್ಟಾನಿ
ನನ್ನ ಕಟ್ಟಾಣಿ
ಇದಕ ಯಾರಿಲ್ಲ ಹವಣಿ
ಆನಿ ಬಂತವ್ವ ಆನಿ

ಅಡವಿ ಕಡೆಯಿಂದ ಹಿಂಡಿನೊಳಗಿಂದ
ದುಂಡಗುರುಳಿ ಬಂತ
ದಾರಿ ಮುಂದೆಲ್ಲ ಮೀರಿ ತುಡುಕಿದರ
ಕೊಸರಿಕೊಂಡು ಬಂತು
ನನ್ನ ಬಂಗಾರ
ಮುದ್ದು ಸಿಂಗಾರ
ಬಾರ ನನ್ನ ಕುವರಾ
ಒರಸತೇನಿ ಬೆವರಾ ।
ನಿನ್ನ ನೋಡಿ ಮುದ್ದಾಡಿ ಹಾಡಿ
ಅಪ್ಪಿದರ ದುಃಖ ಹಗುರಾ
ಅಪ್ಪಿದರ ದುಃಖ ಹಗುರಾ;
ಮರದ ಕೊಂಬಿಯು ಮುರಿದು ಚೆಲ್ಲುವಾ
ಸೊಂಡಿ ಇಲ್ಲ ಇದಕ
ತಳಿರ ಕೈಯಿಂದ ಕೊರಳನಪ್ಪಿದರ
ಸುಗ್ಗಿ ಹಾಂಗ ಬದುಕ

ನನ್ನ ಕಂದ
ದಿನಕೊಂದು ಚಂದ
ಭವ ಬಂಧ ಬಿಡಿಸ ಬಂದ
ಮನಿ ತುಂಬ ಇದರ ಗಂಧ
ತೊದಲು ತುಟಿಗೆ ತಪ್ಪೆಜ್ಜಿ ಹಾಕಿ
ಬರತೈತಿ ಓಡಿ ಓಟ,
ಬಂದು ಸೆರಗ ಮರೆಯಲ್ಲಿ ಅವಿತು
ಹುಡುಹುಡುಕುವಾಟ ಮಾಟ




ಆನಿ ಬಂತು ಅರಸಾನಿ ಬಂತು
ದೊರೆಸಾನಿ ಬಳಿಗೆ ಬಂತು;
ನನ್ನ ಅರಸರಾ ಪಟ್ಟದಾನಿ ಇದು
ಬಾಳ ಗುಟ್ಟ ತಂತು
ನನ್ನೊಡಲ ಜೀವ ಜೀವಾಳದಾಗ
ಚಂದ್ರಾಮನಾಗಿ ನಿಂತು,
ಹುಣ್ಣೀವಿ ದಿನದ ಬೆಳದಿಂಗಳ್ಹಾಲ
ಕುಡಿಲಾಕ ಬಂತ ಬಂತು.
ಆಕಾಶದಾಗ ಚಿಕ್ಕೀಯ ಚಟ್ಟು
ಕಟ್ಟೇತಿ ನಿನಗ ಬಾಳಾ
ಜಗವು ತೊಟ್ಟಿಲಾ, ಚಂದ್ರ ಬಟ್ಟಲಾ
ತುಂಬ ಹಾಲ ಕೊಡುವಾ
ದೇವರಲ್ಲ ಬಡವಾ.
ಜಾಜೀಯ ಬಳ್ಳಿ ಕುಡಿಗ್ಯೆಯ ಚಾಚಿ
ನೀಡೇತಿ ನಿನಗ ಹೂವಾ



ನಿನ ಮ್ಯಾಲ ಅದರ ಜೀವಾ.
ಬಡಕೊಂಡ ಜೀವ ಉಳಕೊಂಡು ಹೇಗೊ
ನಿಂತೈತಿ ಕುಡಿದು ವಿರಸಾ
ನೀನೇನ ಪಡೆದು ಬಂದೀಯೊ ಏನೊ
ನೀ ನನ್ನ ಕನಸ ಮಾನಸಾ.
ಯಾರಾರ ದೃಷ್ಟಿ ಬಡಿದೀತು ಬಾರೊ
ಚಂದ್ರಾಮ ಚೆಲುವ ನೀನು.
ಹಾಲುಗಲ್ಲದಾ ಹಸುಳೆ ತಾಯಿ,
ಸುರಿದೀತು ಜೊಲ್ಲು-ಜೇನು.


ಬಾ ಬಾರೋ ಕಂದ
ಏನಂದ ಚೆಂದ!
ಬಾ ಇಂದ್ರ ಪಟ್ಟದಾನಿ
ದುಡು ದುಡೂ ಬಂದು
ಕಾಲಾಗ ನಿಂತು
ತೂರ್ಯಾಡು ಆನಿಯಾಡು.




ಕನಸಿನಲ್ಲಿ

ಕರ ಕರ ಕರ ಕೊರೆವ ಚಳಿ
ಕೋಳೀಮರಿ ಕುಯ್ದು ಹಾಗೆ;
ಮರ ಮರ ಮರ ಮರವಟ್ಟಿತು
ಥರ ಥರ ಥರ ಧರೆ ನಡುಗಿತು
ಇರುಳು ಕೆರಳಿ ಹೊಡಮರಳಿತು!
ತಾರೆಯೊಂದು ತಿರೆಗುರುಳಿತು.
ಏನಾಯಿತು! ಏಕಾಯಿತು?
ಎನುತಿರೆ ಓ ರೈಲು ಬಂತು!

ಗಡ ಗಡ ಗಡ ಮೈ ನಡುಗಿಸಿ
ಕಂದರದಲಿ ಕಣ್ಣು ಮುಚ್ಚಿ
ಕಂಬಿ ತಪ್ಪಿ ಉರುಳಿತು,
ಮೂರು ಸಾರೆ ಹೊರಳಿತು!







ಅಬ್ಬಾ, ಅಯ್ಯಯ್ಯೊ ಎಂದು
ನಿಂತ ನಾಲ್ಕು ಜನರು ನಾವು
ಗಾಡಿಯನ್ನು ಮೇಲಕೆತ್ತಿ
ಹಳಿಯ ಮೇಲೆ ಬಿಟ್ಟೆವು.
ಜನರಿಲ್ಲದ ಮಾಲು ಗಾಡಿ
ಕೈ ಬಿಟ್ಟೊಡೆ ಕೈಕೊಟ್ಟಿತು
ಎಲ್ಲಿ ಎಲ್ಲಿ, ನಿಲ್ಲು ನಿಲ್ಲು
ಎನಲು ನಮ್ಮ ಗುಲ್ಲು.

ಹಲ್ಲು ಮಸೆದು ಹೊಟ್ಟೆ ಹೊಸೆದು
ಓಡಿತಯ್ಯ ರೈಲು!

ರೈಲು ಬಂಟ



'ಹಿಂದಿನಳಲ ಮರೆತುಬಿಡು
ಇಂದು ಅಡಿಯ ಮುಂದಕಿಡು
ಇಡು, ಇಡು ಇಟ್ಟುಬಿಡೂ'


ಎನುತ ಗಾಡಿ ಓಡುತಿಹುದು ಓಡುತಿಹುದು
ಮುಂದಕೆ
ಮುಂದಕಿಟ್ಟ ಹೆಜ್ಜೆಯಿನಿತು ಸರಿಸದಂತೆ ಹಿಂದಕೆ!

ತಂತಿ ಕಂಬ
ಗಿಡದ ಸಾಲು
ದಾಟಿ ನುಗ್ಗುತಿಹುದು ರೈಲು
ದಾರಿ ಸವೆಯೆ ಮೈಲು ಮೈಲು


ಕಣ್ಗೆ ತಂಪನೀಯುತಿಹುದು ಹಸುರು
ಹುಲ್ಲುಗಾವಲು

ಮೋಹವೆರಚಿ ಬಿಸಿಲ್ಗುದುರೆ
ಕುಣಿಯುತಿರಲು ಸುತ್ತಲು.
ಅಲ್ಲಿ ಮೇವ ದನದ ಹಿಂಡು
ಓಡಿ ಬರುವ ಗಾಡಿ ಕಂಡು
ಮೃತ್ಯು ಕುಣಿದು ಬಂದಿತೆಂದು ಚಂಗನೆದ್ದು
ನೆಗೆದಿವೆ!

ದೂರದಲ್ಲಿ ಶೈಲ ಶಿಖರ
ಬುಗುರಿಯಂತೆ ತಿರುಗಿದೆ;
ಅದರ ಮೇಲೆ ನೆಳಲು ಬಿಸಿಲ ಕೈಯ ಹಿಡಿದು
ಸಾಗಿದೆ.



ಕವಿಯ ಭಾವ ಕಾವುಗೊಂಡು
ಕವಿತೆಯಲ್ಲಿ ಮುಕ್ತಿ ಪಡೆದು
ಶಾಂತ ನಿದ್ರೆಗೈಯುವಂತೆ ಮೋಡ ಹಾಗೆ ತೇಲಿದೆ.
ದುಡುಂ ದುಡುಂ
ಬೀಳ್ದೊಡಂ
ಗಾಳಿ ಮಳೆಯು ಪೊಯ್ದೊಡಂ
ನೆಲವನಗಿದು ಬಗಿಯುವಂತೆ
ಬೃಹದ್ ಬಯಲು ಬಿರಿಯುವಂತೆ



ಕ್ಷಿತಿಜದಂಚನಿರಿಯುವಂತೆ
ಬಿಡುಗಡೆಗೆದೆ ತುಡಿಯುವಂತೆ
ಕಿಡಿ ಕಿಡಿ ಕಿಡಿ ಕಾರುತ!
ಸಿಡಿ ಸಿಡಿ ಸಿಡಿದೇಳುತ!

ರೈಲು ಯಂತ್ರ ಕ್ರಾಂತಿ ಮಂತ್ರ ಘೋಷಿಸುತ್ತ
ಸಾಗಿದೆ!
ತನ್ನ ಬೆನ್ನು ಬಿದ್ದ ಜನಕೆ ಅಭಯ ಹಸ್ತ ನೀಡಿದೆ.
ಲೋಹದೆರಡು ಹಳಿಗಳುದ್ದ
ಗಾಲಿಯುರುಳಿ ಉರುಳುತಿರಲು
ನೆಲದ ಎದೆಯು ನಡುಗುತಿರಲು
ನಿಮಿಷಕೊಂದು ನೂರು ಹೆಜ್ಜೆ
ಇಡುವಕಾಂಡ ತಾಂಡವ!
ಮೂರ್ತಿವೆತ್ತ ಭೈರವ!

ದಿಕ್ತಟಗಳ ಬಿರಿಸುತಿಹುದು ಇದರ ರೌದ್ರ ಆರವ!


ಗುರಿಯ ನೇರ ದಾರಿಗುಂಟ
ನುಗ್ಗುತಿಹನು ರೈಲು ಬಂಟ
ದುಡಿಮೆ ದುಡಿಮೆ ದುಡಿಮೆಯೆಂದು
ಹೊಟ್ಟೆ ಹೊಟ್ಟೆ ಹೊಡೆದುಕೊಂಡು
ಕಲ್ಲಿದ್ದಲಿ ನುಂಗಿಕೊಂಡು
ನಿಟ್ಟುಸಿರಿನ ಕರ್ಬೊಗೆಯದು ಕಾಳೋರಗವಾಗಿರೆ
ತಿದಿಯೊತ್ತುತ ಪೂತ್ಕರಿಸುತ ಗಾಳಿಯ ಮೇಲ್ವಾಯ್ದಿರೆ



ಸಿಡಿಗುಂಡಿನ ಸೇಡಿನಂತೆ
ಬಿಲ್ಗಾಣನ ಬಾಣದಂತೆ

ರೈಲು ಬಂಟನೋಡುತಿಹನು ಓಡುತಿಹನು ಮುಂದಕೆ
ಕರ್ತವ್ಯದ ಭಾರವಿಳಿಸೆ ನಿಲ್ದಾಣದ ಸನಿಹಕೆ
ನಾವು ನೀವು ಅಗಲಿ ಕೂಡಿ ಅತ್ತು ನಗುವ ತಾಣಕೆ!

ಒಂದು ಪುಟ್ಟ ಹಕ್ಕಿಗೆ



೧

ಚಿಟ್ಟ ಗುಬ್ಬಿ, ಪುಟ್ಟ ಗುಬ್ಬಿ
ಮುಳ್ಳಿ ಬೇಲಿಯನ್ನು ತಬ್ಬಿ
ಚೀರಿ ಚೀರಿ ಗಂಟಲುಬ್ಬಿ
ಒಡೆಯುವಂತೆ ಹಾಡಿತು;

ಕೇಳಲಿಲ್ಲ ಜಗದ ಕಿವಿ
ನೋಡಲಿಲ್ಲ ಬಾನ ರವಿ
ನೀನಾದರು ಬಾರೊ ಕವಿ
ಎಂದು ಅಂಗಲಾಚಿತು;

ಹಗಲು ದಿಗಿಲುಗೊಳಿಸುತಿರಲಿ
ಸುಗ್ಗಿ ಹೋಗಿ ಮಾಗಿ ಬರಲಿ
'ಟಿವ್ವೂ ಟಿವ್ವೂ' ಎಂದು ಒರಲಿ
ಕೊರಗಿ ಸಣ್ಣಗಾಯಿತು;

ತೆನೆಯ ಹಾಲುಗಾಳನುಳಿದು
ಗಗನ ಗಮನವನ್ನು ಹಳಿದು
ಗೂಡಿನಲ್ಲಿ ಮೌನ ತಳೆದು
ರೆಕ್ಕೆ ಮುದುರಿ ಕುಳಿತಿತು.

೨
ಏಕೆ ಇಂತು ಉದಾಸೀನ
(ಸದಾಶಿವನಿಗದೇ ಧ್ಯಾನ)
ನಿನ್ನ ಬಾಳಿಗಾವ ಊನ
ಹೇಳು ಪುಟ್ಟ ಹಕ್ಕಿಯೆ?

ಜಗವಪಾರ ನಾದಧುನಿ
ನಿನ್ನ ಧ್ವನಿಯದೊಂದು ಹನಿ
ಅದನೆ ಹಾಡಿ ಹಾಡಿ ತಣಿ
ವಿಶ್ವವೀಣೆ ತಂತಿಯೆ.



ಜನತೆಯೊಂದು ಮೂಢ ಸಂತೆ
ಕಲಹ ಕಪಟ ಕಂತೆ ಕಂತೆ
ನಿನಗೇತಕೆ ಅದರ ಚಿಂತೆ
ಮುನ್ನಿನಂತೆ ನೀನಿರು;

ಬೆಳಕಿನೆಡೆಗೆ ಕಣ್ಣ ತೆರೆ
ಜಗವ ಕಾವನೊಬ್ಬ ದೊರೆ
ಒಪ್ಪಿಸವನಿಗೆಲ್ಲ ಹೊರೆ
ನಿನ್ನಷ್ಟಕ್ಕೆ ಹಾಡಿರು.

ಕೋಗಿಲೆ



೧

ಈಗ ತಾನೆ
ಬಂದಿತೇನೆ
ಮಧುರ ಕಂಠ ಕೋಗಿಲೆ
ಜಗದ ಬಿನದ
ನಿನ್ನ ಮುದದ
ಗಾನವಾಯ್ತೆ ಒಮ್ಮೆಲೆ?

೨


ಕೆಂಪು ತಳಿರು
ಕಂಪಿನಲರು
ಸೂಸುತಿಹುದು ಮಾಮರಾ
ಅಲ್ಲಿ ಕುಳಿತು
ಎಲ್ಲ ಮರೆತು
ಉಲಿಯುತಿರುವ ಸುಮಧುರಾ

೩
ಗಾನ ಕೇಳಿ
ಮೌನ ತಾಳಿ
ಮೂಕವಾಯ್ತು ಭಾವನಾ
ಮನುಜಲೋಕ
ದಿವಿಜನಾಕ
ಗೈದ ಕುಹೂ ಕೂಜನಾ.



೪
ಎದೆಯು ಮಿಡಿದು
ತಾಳ ಹಿಡಿದು
ಕುಣಿಯುತಿಹುದು ಈ ಚಣಾ;
ರಸದ ಕಡಲು
ಹಿಗ್ಗಿನೊಡಲು
ತರತರಂಗ ಬಾಜನಾ.

೫
ರಸದ ಚಿಲುಮೆ
ಹರಿಸಿ, ಒಲುಮೆ
ಸುಧೆಯ ನೀಡು ಕೋಗಿಲೆ
ಮೌನ ಧ್ಯಾನ
ನಿನಗೆ ಊನ
ಕುಕಿಲು ಜಾಣ ಕೋಗಿಲೆ.



ಆಗು



೧

ಎಲ್ಲ ದಳಗಳೂ ಒಂದೇ ದೇಟಿನಲಿ
ಮಾಟಗೊಂಡ ಮೃದು ಹೂವಾಗು,
ಎಲ್ಲ ಹೂವುಗಳ ಪರಿಮಳ ಹೀರುತ
ಒಂದೆ ಹುಟ್ಟಿನಲಿ ಜೇನಾಗು.

೨


ಹಲವು ಹಕ್ಕಿಗಳ ಗೂಡಿಗೆ ಕರೆಯುವ
ಹಣ್ಣನೀವ ಹೆಮ್ಮರವಾಗು
ಹಾರಿದನಿತು ವಿಸ್ತಾರಕೇರುವಾ
ಹಾಡ ಬಿಡುಗಡೆಯ ಬಾನಾಗು.

೩

ಎಲ್ಲೊ ಹುಟ್ಟಿ ಮತ್ತೆಲ್ಲಿಗೋ ಹರಿದರು
ಎಲ್ಲ ಜೀವಿಗಳ ಸೆಲೆಯಾಗು,
ಬೆಟ್ಟ-ಕಡಲುಗಳ ತೊಟ್ಟಿಲು ತೂಗುವ
ಅಂತಃಕರಣದ ನೆಲೆಯಾಗು.

೪

ಆಗು-ಹೋಗುಗಳ ಮೇಗೂ ಕೆಳಗೂ
ಒಟ್ಟಿಗೆ ಸಾಗುವ ಗುರಿಯಾಗು,
ಮಾಗಿದ ಭಾವದ ಜೀವದ ತಂತಿಗೆ
ಝೇಂಕಾರದ ಸುಸ್ವರವಾಗು.



ನಾಡಿನ ಉದಯ

೧

ನಾಡಿನ ಉದಯದ ಹಬ್ಬದ ಹರುಷಕೆ
ಹಾಡಿನ ತೋರಣ ಕಟ್ಟೋಣ,
ಸೋದರ ಭಾವದ ಸಾಲುದೀಪಗಳ
ಮೂಲೆಮೂಲೆಯಲಿ ಬೆಳಗೋಣ.



೨


ಕಲಾಕುಸುಮಗಳ ಚೆಲುವಿನ ಸೃಷ್ಟಿಯ
ಮಲಿನವಾಗದೊಲು ಕಾಯೋಣ,
ನಿಚ್ಚ ಹರಿದು ನೆಲ ಹಚ್ಚಗೆ ತಣಿಸುವ
ಜೀವ ನದಿಗಳಲಿ ಮೀಯೋಣ.

೩

ನಾಡು-ನುಡಿಗೆ ಹೋರಾಡಿದ ಹಿರಿಯರು
ಕಂಡ ಕನಸುಗಳ ಮುಡಿಯೋಣ,
ಹಿಂದಣ ವೈಭವದಲಿ ಮೈಮರೆಯದೆ
ಸ್ವಂತ ಶಕ್ತಿಯಲಿ ದುಡಿಯೋಣ.

೪

ಸಣ್ಣತನದ ಸೋಂಕಿಲ್ಲದೆ ಬೆಳೆಯುವ
ಚಿಣ್ಣರ ಲೋಕವ ತೆರೆಯೋಣ,
ಕನ್ನಡ ಬಾನೊಳು ನವ ಅರುಣೋದಯ-
ಹೊಸ ಇತಿಹಾಸವ ಬರೆಯೋಣ.



ಚಿಣ್ಣರ
ಲೋಕವ
ತೆರೆಯೋಣ

ತುಂಬಿರಲೀ ಮನೆ




ತುಂಬಿರಲೀ ಮನೆ, ತುಂಬಿರಲಿ
ಬಂಧುಬಳಗಕೆಲ್ಲಿಂಬಿರಲಿ,
ಒಂದೆ ಮರದ ಹಲ ಕೊಂಬೆಗಳಂದದಿ
ಏಕ ಜೀವರಸ ಹೊಂದಿರಲಿ.

ಉನ್ನತ ಭಾವದ ಬಾಗಿಲು ತೆರೆದು
ಸ್ನೇಹ ಸುಗಂಧವು ಹರಡಿರಲಿ,
ಕಿಡಕಿಯ ಕಣ್ಣಿಗೆ ದೂರ ದಿಗಂತದ
ವಿಶಾಲ ಕಲ್ಪನೆ ಮೂಡಿರಲಿ.

ಬೆಳಗು-ಬೈಗು ಹೊಂಬಿಸಿಲಿನ ಕಾಂತಿಯು
ಮಕ್ಕಳ ಮೊಗವನು ಚುಂಬಿಸಲಿ
ಹಿರಿ-ಕಿರಿಯರ ಸುಖ-ದುಃಖ ಸಮಾಗಮ
ಸಾಮರಸ್ಯ ಪ್ರತಿಬಿಂಬಿಸಲಿ.

ಮಾವು, ತೆಂಗು, ದಾಳಿಂಬದ ರೆಂಬೆಗೆ
ಹಕ್ಕಿ-ಹಾಡುಗಳ ತೂಗಿರಲಿ,
ಈ ಮನೆಯಂಗಳ ಹೂವರಳುವ ತೆರ
ನೀರೆರೆಯುವ ಸುಖ ನನಗಿರಲಿ.


ನನ್ನ ದೇಶ, ನನ್ನ ಜನ



ನನ್ನ ದೇಶ, ನನ್ನ ಜನ
ನನ್ನ ಮಾನ, ಪ್ರಾಣ, ಘನ
ತೀರಿಸುವೆನೆ ಅದರ ಋಣ
ಈ ಒಂದೇ ಜನ್ಮದಿ?

ಕೆಂಪು ನೆಲದ ಹಸಿರು ಬೆಳೆ
ಕಪ್ಪು ಮಣ್ಣು ಮೊಗದ ಕಳೆ
ಸೂರ್ಯ ಚಂದ್ರ ಚಿಕ್ಕೆಗಳೆ
ನಮ್ಮ ಹಿರಿಯ ಒಕ್ಕಲು.








ನೂರು ಭಾವ, ಭಾಷೆ. ನೆಲ
ನೂರು ಬಣ್ಣ, ವೇಷ, ಕಲೆ
ಸ್ವಚ್ಛಂದದ ಹಕ್ಕಿಗಳೆ
ನಮ್ಮ ಹಾಡು ಬದುಕಲು.
ಪ್ರಾಚೀನವ ತಿಕ್ಕಿ ತೊಳೆ
ವರ್ತಮಾನ ಜೀವಕಳೆ
ಉಕ್ಕೇರಲಿ ಬಾಳ ಹೊಳೆ
ಆ ಭವಿಷ್ಯದೊಡಲಿಗೆ.

ಮೈಕೊಡವಿದೆ ಮೂಕ ಜನ
ಕೈ ಹಿಡಿಯಿರಿ ನಾಕು ಚಣ
ಎದ್ದೇಳಲಿ ಎಲ್ಲ ಗುಣ
ಆ ಸಮೃದ್ಧ ಬಾಳಿಗೆ.





ನಾಯಿ, ಬೆಕ್ಕು ಮತ್ತು ಕ್ರಿಕೆಟ್ಟು

ನಮ್ಮ ಪುಟ್ಟ ಬಹಳ ದಿಟ್ಟ, ನಾಯಿ ಬಾಲ ಜಗ್ಗಿದ
ಬೌಬೌ ಬೊಗಳಿದಂತೆ ಅವನು ಬಹಳ ಹಿಗ್ಗಿದ
ಈ ನನ್ನ ಚುಟುಕು ಪದ್ಯದಲ್ಲಿ ಓದಿದ ಮಕ್ಕಳು
ನನ್ನೆದುರು ಹೇಳಿ ನಲಿದಾಗ ಅವರ ತಾಯಿಯೂ ನಕ್ಕಳು
ನನಗೆ ಸಂತಸ, ಅವಳಲ್ಲ ಮಮ್ಮಿಗಳ ಒಕ್ಕಲು


ಮೊದಲಿನಿಂದಲೂ ನನಗೆ ನಾಯಿ ಬೆಕ್ಕುಗಳು ಪ್ರೀತಿ
ಅವಕೂ ಗೊತ್ತು ತಮ್ಮನ್ನು ಪ್ರೀತಿಸುವವರ ರೀತಿ
ಬಾಲ ಮೇಲೆತ್ತಿ ಮೆತ್ತಗೆ ಪಾದಕ್ಕುಜ್ಜಿ ಸುಳಿದಾಡಿ ಬೆಕ್ಕು
ತೊಡೆಯ ಮೇಲೇರಿ ಗುರುಗುರು ನಿದ್ದೆ– ಹೇಗೆ ಎಬ್ಬಿಸಬೇಕು?
ಸಾಕಿದ ನಾಯಿ ನಾಕು, ಒಂದಾದ ನಂತರ ಒಂದು
ಎಲ್ಲಕ್ಕೂ ಹೆಸರು ಮನು–ಮನುಕುಲವೇ ಒಂದು.
'ಮನುವಿನ ಕತೆ' 'ಮನುವಿನ ಕೊನೆ ಗಳಿಗೆ' ಕವಿತೆ ಬರೆದದ್ದುಂಟು
ನಿಸಾರ್ ಅವನ್ನು ಮೆಚ್ಚಿ, ಲೇಕಿಸಿದ್ದಾರೆ ಮೂಕ ಪ್ರಾಣಿಯ ನಂಟು



ಅದಾಯಿತಲ್ಲ- ಯಾರೋ ಕೊಟ್ಟರು ಮತ್ತೊಂದು ಮುದ್ದುಮರಿ
ಬಣ್ಣಿಸಲಾರೆ ಏಳೆಂಟು ವರ್ಷದಲ್ಲಿ ನಮ್ಮೊಡನೆ ಬೆಳೆದ ಪರಿ
ಮೊಮ್ಮಗಳು ಸೃಷ್ಟಿ ತಾನೇ ಹೆಸರಿಟ್ಟುಬಿಟ್ಟಳು ಅದಕ್ಕೆ 'ಗುಫಿ'
ಏನರ್ಥವೋ – ಕೆಲವರ ಬಾಯಲ್ಲಿ ಮಾತ್ರ 'ಗೋಪಿ'
ಅಪೂರ್ವನ ಬಾಯಲ್ಲಿ 'ಚೇನು', 'ಜಳಕ' ಶಬ್ದ ಬರುವುದೆ ತಡ
ಓಡುವುದು, ಹಿಡಿದು ಸ್ನಾನ ಮಾಡುವವರೆಗೂ ಅವನು ಬಿಡ
ಹಸಿದಾಗ ಅಡಿಗೆಮನೆ ಬಾಗಿಲಲ್ಲಿಯೇ ಹೂಡುವುದು ಬಿಡಾರ,
ಸೊಸೆ ಬಿಸಿಬಿಸಿ ಚಪಾತಿ ಹಾಕಿದಾಗ ಹೊಟ್ಟೆ ಭರಪೂರ
ಗೇಟು ಸಪ್ಪಳಾದರೆ ಸಾಕು, ಬೊಗಳುವುದು ದೊಡ್ಡ ದನಿ ತೆಗೆದು
ಒಳಗೆ ಬಂದರೆ, ಅರಿಯದವರನೂ ಮೂಸಿ, ಬಾಲವಲ್ಲಾಡಿಸುವದು
ಅಧ್ಯಕ್ಷನಂತೆ ಮಧ್ಯದಲ್ಲಿ ಕುಳಿತು ಕೇಳುವುದು ನಮ್ಮ ಮಾತುಕತೆ
'ನೀವಂತೂ ಸರಿ, ನಿಮ್ಮ ನಾಯಿಯೂ ಸಭ್ಯ'–ಅವರ ಮೆಚ್ಚಿಗೆ–ಮಮತೆ
ಬೆಂಗಳೂರಿನ ಮೊಮ್ಮಗ ಕುಶಾಲನ ನಾಯಿ ಕಥೆ ಹೇಳಲೇಬೇಕು
'ಕನ್ನಡದ ಹೆಸರಿಡು' ಎಂದಾಗ ಒಪ್ಪಿದನಲ್ಲಾ, ಅಷ್ಟೇ ಸಾಕು.



ಏಳೆಂಟು ವರುಷದ ಹಿಂದಿನ ಮಾತು: ಪಾಕಿಸ್ತಾನದಲ್ಲಿ ಭಾರತದ ಟೆಸ್ಟು
ಕೇಳಬೇಕೇ? ಎರಡೂ ತಂಡದಲ್ಲಿ ತುರುಸು ತಿಕ್ಕಾಟವೆಷ್ಟು!
ಭಾರತವ ಗೆದಿಸಿತ್ತು ಧೋನಿಯ ಸಿಕ್ಸರಿನ ಮೇಲೆ ಸಿಕ್ಸರ್
ಕುಶಾಲ ಫೋನಾಯಿಸಿದ: 'ಧೋನಿಯ ಹೆಸರಿಡಲೇ, ಇದು ಬಾಕ್ಸರ್?'
ನಾನು ಉತ್ತರಿಸಿದೆ: 'ಅದೇ ಇರಲಿ, ನಿಮ್ಮ ಹೆಸರಿನ ಹೊಸ ಮನೆ
ಕಾಯಲು
ಮುಷರಫ್ ಬೇರೆ ಬಣ್ಣಿಸಿದ್ದಾನೆ ಧೋನಿಯ ತಲೆಗೂದಲು.'
ಇತ್ತೀಚೆಗೆ ಮೊಹಾಲಿಯಲ್ಲಿ ಭಾರತಾಸ್ಟ್ರೇಲಿಯಾ ಏಕದಿನ ಪಂದ್ಯ-
ವ್ಯರ್ಥ ಧೋನಿಯ ಅಜೇಯ ಶತಕ, ಇದು ಮಾತ್ರ ಚೋದ್ಯ.
ಬಾಕ್ಸರ್ ಧೋನಿಯು ಮಲಗಿಬಿಟ್ಟಿತು ಮುದುಡಿಕೊಂಡು-
ಸೋಲುಗೆಲುವುಗಳು ಹಗಲಿರುಳಿನಂತೆ ಒಂದರ ಹಿಂದೆ ಒಂದು.




ಚುಟುಕು-ಗುಟುಕು



'ಸಭ್ಯರಾಟ'ಕ್ಕೆ ಕೊನೆಗೂ
ಸಚಿನ್ ಸಲ್ಲಿಸಲಿದ್ದಾನೆ ನಮನ,
ರಿಕಿ ಪಾಂಟಿಂಗ್ ಮರೆತಿಲ್ಲವಂತೆ
'ಮಂಕಿಗೇಟ್' ಹಗರಣ


ಚಿಗುರೆಲೆ–ಕಗ್ಗೊಲೆ

ಅಲ್ಲಿ ಥಳಥಳ, ಇಲ್ಲಿ ಥಳಥಳ
ಹುಲುಗಲದ ಚಿಗುರೆಲೆಗಳು;
ದಿನವು ಮುಂಜಾವದಲಿ ಪತ್ರಿಕೆ
ಸಾರುವದು; ಕಗ್ಗೊಲೆಗಳು.




ವಸಂತೋತ್ಸವ

ತಳಿರುನುಟ್ಟಿದೆ ಹೂವ ತೊಟ್ಟಿದೆ
ಮಾವು ಹೊರಟಿದೆ ಎತ್ತರೀ?
ಕಾಮ ಬಿಸಿಲಲಿ ನಡೆದು ಬರುವನು
ಅದಕೆ ಹಿಡಿದಿವೆ ಛತ್ತರಿ.



ಸಂಜೆಯ ಸೂರ್ಯ


ಬಾನ ಹೆಗಲಿಗೆ ಸಂಜೆ-ಸೂರ್ಯನ
ಜರದ ಸೆಲ್ಲೆಯ ಹೊದಿಸಲು
ಇಳೆಗೆ ಇಳಕಲ್ ಸೀರೆ, ಕುಪ್ಪಸ,
ಹಣೆಗೆ ಕುಂಕುಮ ಬಟ್ಟೊಲು.




ವಿಮಾನ

ಹಗಲೆಲ್ಲ ಹಾರಾಡಿದ ಹಕ್ಕಿಯು
ಸಂಜೆ ಮಲಗುವುದು ಗೂಡಿನಲಿ
ಗಗನದಿ ಹಾರುವ ಭಾರಿ ವಿಮಾನ
ಎಲ್ಲಿ ಮಲಗುವದು ಇರುಳಿನಲಿ?







ರೈತ–ಸೈನಿಕ

ಯುದ್ಧ ಬಂದರು, ಬುದ್ಧ ಬಂದರು
ರೈತ ಹಿಡಿವನು ಗುದ್ದಲಿ;
ಹಿಮಾಲಯದಡಿ ನಮ್ಮ ಸೈನಿಕ–
ರೆದೆಯು ನಿಗಿನಿಗಿ ಇದ್ದಲಿ.


ಕವಿಯ ಮಾತು



'ಎತ್ತು ಬಾವುಟ, ನುಗ್ಗು ಮುಂದಕೆ'
ಕವಿಯ ಮಾತಿನ ಗುಂಡಿಗೆ
ಹಿಮದ ಮೈ ಬಿಸಿರಕ್ತವೇರಿತು
ಬೆಚ್ಚಗಾಯಿತು ಥಂಡಿಗೆ.

ಭಾಷಣ

ಭಾಷಣದ ಸುರಿಮಳೆಗೆ ತಕ್ಷಣ
ಮುರುಕು ಮನೆಗಳು ಬಿದ್ದವು;
ಮರುದಿನವೇ ಎಲ್ಲೆಲ್ಲು ತಣ್ಣಗೆ;
ನಾಯಿ ಕೊಡೆಗಳು ಎದ್ದವು.



ಕಿಟಕಿ

ಕಿಟಕಿಯ ಬಳಿ ನಿಂತು ಹಣಿಕಿ
ಆಕಾಶವ ನೋಡುವೆ
ಹಕ್ಕಿಯಂತೆ ಮೋಡದೊಡನೆ
ನಾನು ಎಂದು ಆಡುವೆ?






ರಾಷ್ಟ್ರಪಕ್ಷಿ

ಮೊದಲೇ ಡೌಲಿನ ನವಿಲೆ ನಿನಗಿದೊ
'ರಾಷ್ಟ್ರಪಕ್ಷಿ' ಎಂಬಭಿದಾನ;
'ಪದ್ಮಭೂಷಣ'ವ 'ಭಾರತರತ್ನ'ವ
ಕೊಡದಿರುವುದು ನಿನಗವಮಾನ.

ಜಗದ್ಗುರು

ನಾಡಿನ ತುಂಬಾ ನೂರು ಜಗದ್ಗುರು;
ಇರುವುದು ಜಗವೊಂದೇ;
ಕಾಡಿನ ತುಂಬಾ ಬಣ್ಣದ ಹೂಗಳು:
ವಾಸನೆ ಕೆಲವೊಂದೇ.







ಮಹಡಿ

ಮಹಡಿ ಮೇಲೆ ನಮ್ಮ ಮನೆ
ಒಂದು, ಎರಡು, ಮೂರು;
ಮೆಟ್ಟಿಲೇರಿ ಬರಲು ಅಜ್ಜಿ
ಮುಖದ ತುಂಬ ಬೆವರು.




ದೇಹ-ಯಂತ್ರ

ಎನಿತೌಷಧ ಕುಡಿದು ಗುಳಿಗೆ
ನುಂಗಿ, ಚುಚ್ಚಿಕೊಂಡರೂ
ಈ ದೇಹದ ಯಂತ್ರ ಬೇರೆ-
ಬಲ್ಲ ಬ್ರಹ್ಮ ದೇವರು.

ಚಿಟ್ಟೆ

ಬಳ್ಳಿಯಲ್ಲಿ ಮೊಗ್ಗೆಯೊಂದು
ಹಿಗ್ಗಿನಿಂದ ಅರಳಿತು.
ಚಿಟ್ಟೆಯೊಂದು ಪುಟ್ಟದೊಂದು
ಮುತ್ತುಕೊಟ್ಟು ಹೋಯಿತು.









ಹತ್ತಿಯ ಹೊಲ

ಹಸಿರು ಮಗ್ಗಿಯ ಸಾಗಿನಲಿ ಚಿಟ-
ಗುಬ್ಬಿ ಕುಳಿತಿವೆ ಬೆಳ್ಳಗೆ-
ಕುಸುಬೆಹೂವಂಚಿನ ಕಸೂತಿಯು
ಜರದ ಕಣ ಮುತ್ತೈದೆಗೆ.



ಮಗುವಿನ ನಗು

'ಕರುಣಾ' ಎಂದರೆ ಅರುಣೋದಯ ತೆರ
ತುಟಿಯಂಚಿಗೆ ನಗೆ-ಬೆಳಕು;
ನಮ್ಮೆದೆಭೂಮಿಯ ಕಸವನು ಕಿತ್ತು
ಬಿತ್ತುವ ಸಕ್ಕರೆ ಹಳಕು.





ಬೇಕು

ತೇಗಬೇಕು ಸಂತೃಪ್ತಿಗೊಂಡು
ಆತಿಥ್ಯ ಪಡೆದಮೇಲೆ
ರಾಗ ಬೇಕು ಆಲಾಪದೊಡನೆ
ಸಂಗೀತವೆಂದಮೇಲೆ.



ಮಳೆ

ನಮ್ಮ ಊರು ಬಹಳ ಚಂದ
ಮಳೆಯು ಬಂದು ಹೋದರೆ,
ನನ್ನ ತಂಗಿ ಅದಕು ಚಂದ
ಅಳುವು ನಿಲ್ಲಿಸಿ ನಕ್ಕರೆ.


ಗುಳಿಗೆ


ದುಂಡು ಮೊಗದಲಿ ಮಂದಹಾಸ ಬೀರುವ ಗುಳಿಗೆ
ನಿನ್ನನಿದೊ ನುಂಗಿ ನಾ ನೀರು ಕುಡಿವೆ;
ಡಾಕ್ಟರರು ಹೇಳಿದುದನೆಲ್ಲ ತಪ್ಪದೆ ಮಾಡು
ಹೊಟ್ಟೆಯೊಳಗೇ ನೀನು ಮೋಕ್ಷ ಪಡೆವೆ.



ಸೋನೆ

ಸುರೀ ಸುರಿವ ಸೋನೆಯೇ
ಮುಗಿಲಿಗಾವ ಬೇನೆಯೇ?
ಕಣ್ಮುಚ್ಚಿದ ದಾನಿಯೇ
ಕಣ್ದೆರೆದರೆ ಹಾನಿಯೇ?





ಮಧ್ಯಾಹ್ನ

ತಿರುಗೇ ತಿರುಗುತ್ತಿದೆ ಬಿಡುವಿಲ್ಲದೆ
ತಲೆಮೇಲಿನ ಪಂಖ;
ಆಫೀಸಿನ ಟೈಪರೈಟರು ಹೊಡೆದೇ
ಹೊಡೆಯುತ್ತಿದೆ ಶಂಖ.





ಗುಲ್‌ಮೊಹರ್

ಮೇ ತಿಂಗಳ ಉರಿಬಿಸಿಲಿನ ಕೆಂಡವ
ಕೆದರಿದೆ ಗಾಳಿಯು ಎಂಬ ತೆರ
ದಾರಿಯ ಎಡಕೂ ಬಲಕೂ ಕೆಂಪಗೆ
ಹೂವನು ಹರಡಿವೆ ಗುಲ್‌ಮೊಹರ.

ಕೊಡೆ

ನಾ ಕೊಡೆ, ನೀ ಕೊಡೆ, ಕೊಡದಿದ್ದರೆ ಬಿಡೆ
ಏರಿಸಿ ಹಿಡಿ, ನಡೆ ಯಾರ ಭಿಡೆ-
ಬಿಸಿಲಿಗೆ ಕಾಯದೆ, ಮಳೆಯಲಿ ತೋಯದೆ
ಎಲ್ಲರ ಮೇಲಿದೆ ನೀಲ ಕೊಡೆ.






ಸ್ವಾತಂತ್ರ್ಯದ ಸವಿ

ನಾಡಿಗೆ ದೊರೆತಿಹ ಸ್ವಾತಂತ್ರ್ಯದ ಸವಿ–
ಹತ್ತಿದೆ ಕೆಲವರಿಗೆ–
ಎಡಗೈ, ಬಲಗೈ ಬೆಚ್ಚಗೆ ಇಡದಿರೆ
ಕೊಡುವರು ಕಸಬರಿಗೆ.

ಪಯಣ

ದಿನವೂ ಗದ್ದಲ, ಗಡಿಬಿಡಿ ರೈಲಿಗೆ
ಕೂಡಲು ಜಾಗವೆ ಇಲ್ಲ;
ನಮ್ಮ ಪ್ರಯಾಣವ ಮುಗಿಸಿದ ಮೇಲೆ
ತೀರಿತು, ಯೋಚನೆಯಿಲ್ಲ.



ಮುಂಬೈ

ಮನೆ, ಮನೆ, ಮನೆ: ಗೂಡು, ಗೂಡು, ಗೂಡು
ಜನ, ಜನ, ಜನ: ಹೊರಚೆಲ್ಲಿದೆ ರೋಡು
ರೈಲು, ಬಸ್ಸು, ರೆಕ್ಕೆಯಾಗಿ ಮುಕ್ಕುತಿಹನು ವೇಳೆಯ
ಮುಂಬೈಯಲಿ ಇವನು ಹೀಗೆ
ಬೇಯಿಸುವನು ಬೇಳೆಯ.







ಮಕ್ಕಳ ಕೈಗೆ ಈ ಪುಸ್ತಕಗಳನ್ನು ಕೊಡಿ

ಚಿಣ್ಣರ ಲೋಕವ ತೆರೆಯೋಣ	ಚೆನ್ನವೀರ ಕಣವಿ
ಹೊಸ ಹೊಸಾ ಹೂವು	ಬಿ.ಎ. ಸನದಿ
ತನನ ತೋಂ	ಡಿ.ಎಸ್. ಕರ್ಕಿ
ಅಡಗೂಲಜ್ಜಿಯ ಕಥೆಗಳು	ಪಾರ್ವತಮ್ಮ ಮಹಾಲಿಂಗಶೆಟ್ಟಿ
ಹಳೆಯ ಕಥೆಗಳಿಗೆ ಹೊಸ ಬಾಲ	"
ಹಿಂದೂ ಮಗುವೇ, ನಿನಗಾಗಿ ಒಂದು ಪುಟ್ಟ ಪುಸ್ತಕ	"
ಪರಂಪರೆಯ ಪುಟಗಳಿಂದ	ಸಂಧ್ಯಾ ಪೈ
ಸಂಧ್ಯಾ ಮಾಮಿ ಹೇಳಿದ ಗಮ್ಮತ್ತಿನ ಕಥೆಗಳು	"
ಸಂಧ್ಯಾ ಮಾಮಿ ಹೇಳಿದ ಪ್ರಾಣಿಗಳ ಕಥೆಗಳು	"
ಸಂಧ್ಯಾ ಮಾಮಿ ಹೇಳಿದ ಬುದ್ಧಿವಂತರ ಕಥೆಗಳು	"
ಸಂಧ್ಯಾ ಮಾಮಿ ಹೇಳಿದ ಜಾಣರ ಕಥೆಗಳು	"
ಸಂಧ್ಯಾ ಮಾಮಿ ಹೇಳಿದ ಕ್ಲಾಸಿಕ್ ಕಥೆಗಳು	"
ಬಾಲಸುರಭಿ	ಗುರುರಾಜ ಬೆಣಕಲ್
ಅರಳು ಮಲ್ಲಿಗೆ	"
ಮಂಗನ ಮದುವೆ	"
ಸಂತಸ ನೀಡುವ ಹೂಗಳು	"
ಒಗಟು ಬಿಡಿಸೋ ಜಾಣ ಎನಿಸೋ	"
ಚೂರು ಕಥೆ ಜೋರು ಕಥೆ	"
ಪ್ರೇರಕ ಪ್ರಸಂಗಗಳು	"
ಏನ್ ಕಥೆ! ಏನ್ ಕಥೆ!!	"
ಓದಿವನಿಂದು ಪ್ರೇರಣೆಗೆಂದು	"
ಅಮ್ಮನು ಊರಿಗೆ ಹೋದರೆ	"



ನಮ್ಮ ಹಿರಿಯ ಕವಿಗಳು ಹಿರಿಯರಿಗಲ್ಲದೆ ಕಿರಿಯರಿಗೂ ಪ್ರಿಯವಾಗುವಂತೆ ಪದ್ಯ ಬರೆಯುವುದು ಮಕ್ಕಳ ಕಾವ್ಯದ ಘನತೆಯನ್ನು ಪರೋಕ್ಷವಾಗಿ ಹೆಚ್ಚಿಸಬಲ್ಲದು. ಕುವೆಂಪು, ಬೇಂದ್ರೆ, ರಾಜರತ್ನಂ ಅವರ ಈ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿದ ನಂತರದ ತಲೆಮಾರಿನ ಹಿರಿಯರಲ್ಲಿ ಚೆನ್ನವೀರ ಕಣವಿಯವರು ಮುಖ್ಯರು. ನಮ್ಮ ತಲೆಮಾರಿನೊಂದಿಗೆ ನವೋದಯದ ತಲೆಮಾರನ್ನು ಸಂಬಂಧಿಸಿ ಸಂಪನ್ನವಾದ ಒಂದು ಸಂಸ್ಕೃತಿಯ ಹರಿವನ್ನು ಹರಿಗಡಿಯದಂತೆ ನೋಡಿಕೊಳ್ಳುವ ಮೂಲಕ ನಮಗೆಲ್ಲ ಕಣವಿಯವರು ಒಂದು ಆದರ್ಶವಾಗಿ ಪರಿಣಮಿಸಿದ್ದಾರೆ.

ಕಣವಿಯವರ ಮಕ್ಕಳ ಕವಿತೆಗಳಲ್ಲಿ ಕಾಣುವ ಸಹಜವೂ ಸರಳವೂ ಆದ ಭಾಷೆಯ ಬಳಕೆ, ಸುಲಲಿತವಾದ ಲಯದ ವಿನ್ಯಾಸ, ಸೃಷ್ಟಿಯ ಚರಾಚರಗಳಲ್ಲೆಲ್ಲ ಚೈತನ್ಯದ ಜೀವದಾಟವನ್ನು ಕಾಣಿಸುವ ಮಧುರವಾದ ಕಲ್ಪನಾಶೀಲತೆ ಅಪರೂಪದ್ದು. ಮಕ್ಕಳ ಬೆನ್ನ ಮೇಲೆ ಶಾಲೆಯ ಚೀಲದಂತೆ ಭಾರವಾಗಿ ಕೂಡದೆ ಅವರ ಹೆಗಲ ಮೇಲೆ ಹಗುರವಾಗಿ ಕೂತು ಚಿಲಿಪಿಲಿಸುವ ಈ ಕವಿತೆಗಳು ಮಕ್ಕಳಿಗೆ ಬಣ್ಣದ ಹಕ್ಕಿಗಳಂತೆ ಆಪ್ಯಾಯಮಾನವಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

– ಎಚ್.ಎಸ್. ವೆಂಕಟೇಶಮೂರ್ತಿ

ಸಾಹಿತ್ಯ ಪ್ರಕಾಶನ
ಹುಬ್ಬಳ್ಳಿ – 580 020

₹ 50